ನನ್ನ ಓದು

# ಕಥನ ಕಲೆಯ ಘನತೆ ಹೆಚ್ಚಿಸಿದ ಕಥೆಗಾರ

## ರಾಜಶೇಖರ ನೀರಮಾನ್ವಿ ಕಥೆಗಳ ಮರು ಅವಲೋಕನ



ಅಮರೇಶ ನುಗಡೋಣಿ

ಕನ್ನಡ ಸಣ್ಣಕಥೆಗಳ ಸಂದರ್ಭದಲ್ಲಿ ಯಾರೂ ಹೇಳಲೇಬೇಕಾದ ಮಾತು: ರಾಜಶೇಖರ ನೀರಮಾನ್ವಿ ಶಕ್ತ ಕಥೆಗಾರ. ಕೆಲವೇ ಕಥೆಗಳನ್ನು ಬರೆದಿದ್ದರೂ ನೆನಪಿನಲ್ಲಿ ಉಳಿಯುವ ಕಥೆಗಾರ. ಅವರ 'ಹಂಗಿನರಮನೆಯ ಹೊರಗೆ' (1978), 'ಕರ್ಪೂರದ ಕಾಯದಲ್ಲಿ' (1990) ಎರಡು ಕಥಾಸಂಕಲನಗಳು ಪ್ರಕಟವಾಗಿವೆ. ಈ ಸಂಕಲನಗಳಲ್ಲಿ 12 ಕಥೆಗಳಿವೆ. 'ಹಂಗಿನರಮನೆಯ ಹೊರಗೆ' ಕಥೆ ಅನೇಕ ಆಂಥಾಲಜಿಗಳಲ್ಲಿ ಸೇರಿದೆ. ಈ ಕಥೆ ಹಿಂದಿ ಭಾಷೆಯಲ್ಲಿ ಕಿರುತೆರೆಯಲ್ಲಿ ಚಿತ್ರರವಾಗಿದೆ.

ರಾಜಶೇಖರ ನೀರಮಾನ್ವಿ ಅವರ ಕಥೆಗಳನ್ನು ಅಸ್ತಿತ್ವವಾದದ ಹಿನ್ನೆಲೆಯಲ್ಲಿ ಗ್ರಹಿಸಬಹುದು. ಕನ್ನಡ ನವ್ಯ ಸಾಹಿತ್ಯಕ್ಕೆ ಆರಂಭದಲ್ಲಿ ಅಸ್ತಿತ್ವವಾದವು ಬೆನ್ನೆಲುಬಾಗಿತ್ತು. ಮೂಲತಃ ವ್ಯಕ್ತಿ ಸಮಾಜದ ಭಾಗವೇ ಆಗಿದ್ದರೂ ವ್ಯಕ್ತಿಕೇಂದ್ರಿತ ಚಿಂತನೆಗೆ ಮಹತ್ವ ನೀಡಲಾಯಿತು. ಅದಕ್ಕೆ ಕಾರಣವೂ ಇದೆ. ಸಮಾಜದಲ್ಲಿ ಮದುವೆ, ಕುಟುಂಬ, ಜಾತಿ, ಧರ್ಮ, ಸಂಘ-ಸಂಸ್ಥೆಗಳು ಸ್ಥಾಪಿತ ಮೌಲ್ಯಗಳನ್ನು ಪೋಷಿಸಿಕೊಂಡು ಬರುತ್ತಿವೆ. ವ್ಯಕ್ತಿಗೆ ಆಯ್ಕೆ ಸ್ವಾತಂತ್ರ್ಯವಿಲ್ಲ. ಸಿದ್ಧಗೊಂಡ, ಯಾರೋ ರೂಪಿಸಿದ ಜೀವನ ವಿಧಾನದಲ್ಲಿ ವ್ಯಕ್ತಿ ಬದುಕಬೇಕಾಗಿದೆ. ಇದನ್ನು ಮೀರಿ ಬದುಕಲು, ಹೊಸ ಜೀವನ ವಿಧಾನವನ್ನು ರೂಪಿಸಿಕೊಳ್ಳಲು ವ್ಯಕ್ತಿಗೆ ಸಾಧ್ಯವಾಗುವುದಿಲ್ಲ. ಸಾಧ್ಯ ಮಾಡಿಕೊಳ್ಳಬೇಕಾದರೆ ವ್ಯಕ್ತಿಗತ ನೆಲೆಯಲ್ಲಿ ಹೋರಾಟ ಮಾಡಬೇಕು. ಪ್ರತಿ ಹೆಜ್ಜೆಗೆ ಅಡ್ಡಿ-ಆತಂಕಗಳು ಎದುರಾಗುತ್ತವೆ. ಹೊಸ ನೈತಿಕತೆಯನ್ನು ನೆಲೆಗೊಳಿಸಲು ವ್ಯಕ್ತಿಗೆ ಕಷ್ಟವಾಗುತ್ತದೆ. ಸ್ಥಾಪಿತ ಮೌಲ್ಯಗಳ ಪರಿಸರದಲ್ಲಿ, ಹುಸಿ ನೈತಿಕತೆಯಲ್ಲಿ ವ್ಯಕ್ತಿ ಬದುಕುತ್ತಿದ್ದಾನೆಂಬ ಅರಿವು ಮೂಡಿದರೂ ಬದುಕುವುದು ಅನಿವಾರ್ಯವಾಗಿ, ಅದನ್ನೇ ಸಮರ್ಥಿಸಿಕೊಳ್ಳುತ್ತ ನಿಜವಾದ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾನೆ ಎಂಬುದು ಅಸ್ತಿತ್ವವಾದದ ತಿಳಿವಳಿಕೆ. ವ್ಯಕ್ತಿ ಏನೂ ಆಗಿರುವುದಿಲ್ಲವೋ ಅದು ಆಗಬೇಕು. ಆಗಬೇಕಾದರೆ ಸ್ವತಂತ್ರ ಆಯ್ಕೆ ಮತ್ತು ಅದನ್ನು ಸಮರ್ಥವಾಗಿ ನಿಭಾಯಿಸಬೇಕು. ಆಗ ನಿಜವಾದ ವ್ಯಕ್ತಿ ಆಗುತ್ತಾನೆ. ಇರುವಿಕೆ ಮುಖ್ಯವಲ್ಲ. ಆಗುವಿಕೆ ಮುಖ್ಯ. ಆಗುವಿಕೆಗಾಗಿ ವ್ಯಕ್ತಿ ತನ್ನ ಕುಟುಂಬ, ಧರ್ಮ, ಬದುಕುವ ಪರಿಸರ, ಸಂಘ-ಸಂಸ್ಥೆ, ಎಲ್ಲದರ ವಿರುದ್ಧ ಹೋರಾಡಬೇಕು. ಈ ದಾರಿ ಸರಳವಲ್ಲ.